

# ಹಾವುಗಳ ರಕ್ಷಕಿ ಸಾಯಿಬಾ

■ ರಾಹುಲ ಬೆಳಗಲಿ

'ಹಾವಿನ ದ್ವೇಷ ಹನ್ನೆರಡು ವರುಷ, ನನ್ನ ರೋಷ ನೂರು ವರುಷ' ಎಂದು 'ನಾಗರಹಾವು' ಚಲನಚಿತ್ರದಲ್ಲಿ ವಿಷ್ಣುವರ್ಧನ ಹಾಡುವುದನ್ನು ನೋಡಿದರೆ, ಈಗಲೂ ರೋಮಾಂಚನ ಆಗುತ್ತದೆ. ನಿಜಕ್ಕೂ ಹಾವಿಗೆ ಅಷ್ಟೆಲ್ಲ ಜ್ಞಾಪಕ ಶಕ್ತಿ ಮತ್ತು ದ್ವೇಷ ಮನೋಭಾವ ಇರುತ್ತಾ ಎಂದೆಲ್ಲ ಪ್ರಶ್ನೆಗಳು ಮನದಲ್ಲಿ ಉದ್ಭವಿಸುತ್ತವೆ. ಅಸಲಿ ಸಂಗತಿಯೆಂದರೆ, ಹಾವಿಗೆ ಅಂತಹ ಗಾಢ ನೆನಪಿನ ಶಕ್ತಿ ಮೊದಲೇ ಇರುವುದಿಲ್ಲ. ದ್ವೇಷ ಸಾಧಿಸುವುದಂತೂ ಇನ್ನೂ ದೂರದ ಮಾತು.

ಈ ವಿಷಯವು ವೈಜ್ಞಾನಿಕವಾಗಿ ದೃಢಪಟ್ಟಿದ್ದರೂ ಮತ್ತು ಹಲವರು ಹಲವು ಸಂದರ್ಭಗಳಲ್ಲಿ ಇದನ್ನು ಸಾರಿ ಸಾರಿ ಹೇಳಿದರೂ ಕೆಲವರು ನಂಬುವುದಿಲ್ಲ. ಆದರೆ, ಹಾವಿನ ಸುರಕ್ಷಿತ ಬದುಕು ಮತ್ತು ಆರೋಗ್ಯ ದೃಷ್ಟಿಯಿಂದ ಇದರ ಬಗ್ಗೆ ಜಾಗೃತಿ ಮೂಡಿಸಬೇಕಾದದ್ದು ಅಗತ್ಯ ಮತ್ತು ಅನಿವಾರ್ಯ. ಈ ಅರಿವಿನ ಅಭಿಯಾನದಲ್ಲಿ ಹಲವರು ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ. ಅವರಲ್ಲಿ ಒಬ್ಬರು ಸಾಯಿಬಾ ಶೆಳ್ಕೆ.

ಮಹಾರಾಷ್ಟ್ರದ ನಾಗಪುರದಲ್ಲಿ ವಾಸವಿರುವ ಸಾಯಿಬಾ ಅವರಿಗೆ, 'ಮನೆಯಲ್ಲಿ ಹಾವು ನುಗ್ಗಿದೆ. ದಯವಿಟ್ಟು ನಮ್ಮನ್ನು ರಕ್ಷಿಸಿ. ಅದನ್ನು ಹೊರಗೆ ಹಾಕಿ, ನಮ್ಮನ್ನು ಸಂಕಷ್ಟದಿಂದ ಪಾರು ಮಾಡಿ' ಎಂದು ಯಾರಾದರೂ ದೂರವಾಣಿ ಕರೆ ಮಾಡಿದರೆ ಸಾಕು, ಕಾರ್ಯಾಚರಣೆಗೆ ಇಳಿದು ಬಿಡುತ್ತಾರೆ. ಯಾವುದೇ ಪ್ರಮುಖ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೂ ಅಥವಾ ಮನೆಯಲ್ಲಿ ಯಾವುದೇ ಮುಖ್ಯವಾದ ಕೆಲಸದಲ್ಲಿ ತೊಡಗಿಕೊಂಡಿದ್ದರೂ ಹಾವಿನ ರಕ್ಷಣೆಗೆ ಪ್ರಥಮ ಆದ್ಯತೆ ನೀಡಿ, ಕರೆ ಮಾಡಿದವರ ಸ್ಥಳಕ್ಕೆ ಹೊರಟು ಬಿಡುತ್ತಾರೆ.

ಸೀರೆ ಉಟ್ಟಿರಲಿ, ಚೂಡಿದಾರ ತೊಟ್ಟಿರಲಿ ಅಥವಾ ಯಾವುದೇ ಉಡುಪು ಧರಿಸಿರಲಿ, ಹಾವನ್ನು ಹಿಡಿಯಲು ಯಾವ ಉಡುಪು ತೊಡಕಾಗುವುದಿಲ್ಲ ಎಂಬ ನಂಬಿಕೆ ಅವರದ್ದು. ಅತ್ಯಂತ ಸುರಕ್ಷತಾ ವಿಧಾನದಲ್ಲಿ ಹಾವಿಗೂ ತೊಂದರೆ ಆಗದೇ ಮತ್ತು ಜನರಿಗೆ ಅಪಾಯ ಉಂಟು ಮಾಡದೇ, ಹಾವನ್ನು ಹಿಡಿಯುತ್ತಾರೆ. ಜೊತೆಗೆ ಎಲ್ಲರಿಗೂ ಜಾಗೃತಿ ಮೂಡಿಸುತ್ತ ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸುತ್ತಾರೆ. ಹಾವು ಎಷ್ಟೇ ವಿಷಕಾರಿ, ಅಪಾಯಕಾರಿ ಮತ್ತು ಚುರುಕಿನಿಂದ ಕೂಡಿದ್ದರೂ ಸಾಕಷ್ಟು ಎಚ್ಚರವಹಿಸಿ, ಕಿಂಚಿತ್ತು ಆತಂಕಗೊಳ್ಳದೇ ಪುಟಾಣಿ ಚೀಲದಲ್ಲಿ, ಅದನ್ನು ಹಾಕಿಕೊಂಡು ಕಾಡು ಅಥವಾ ಸುರಕ್ಷಿತ ಸ್ಥಳಕ್ಕೆ ಒಯ್ದು ಬಿಡುತ್ತಾರೆ.

ವಿಷಯ ಏನೇ ಇದ್ದರೂ ಸತ್ಯವನ್ನು ಆಧರಿಸಿ ಇದ್ದದ್ದು ಇದ್ದ ಹಾಗೆ ಹೇಳಲು ಸಾಯಿಬಾಗೆ ಯಾವುದೇ ಹಿಂಜರಿಕೆ ಇಲ್ಲ. ನಾಗರಪಂಚಮಿ ಪ್ರಯುಕ್ತ ನಾಗಪುರದಲ್ಲಿ ಮಹಿಳೆಯರು ಸೇರಿಕೊಂಡು ಹುತ್ತಕ್ಕೆ ಅಥವಾ ದೇವಾಲಯಕ್ಕೆ ತೆರಳಿ ನಿಜ ಹಾವಿಗೆ ಹಾಲೆರೆಯುತ್ತಿರುವುದು ಗೊತ್ತಾಯಿತು. ಸಾಯಿಬಾ ತಕ್ಷಣವೇ ಅಲ್ಲಿಗೆ ತೆರಳಿ, 'ಹಾವಿಗೆ ದಯವಿಟ್ಟು ಹಾಲು ನೀಡಬೇಡಿ. ಅದಕ್ಕೆ ಅಜೀರ್ಣ ಆಗುತ್ತದೆ. ಅದು ದೇವರಲ್ಲ. ಅದು ಮುಗ್ಧ ಮತ್ತು ಪ್ರೀತಿಯ ಪ್ರಾಣಿ. ಅದನ್ನು ಅದರ ಪಾಡಿಗೆ ಇರಲು ಬಿಡಿ. ತೊಂದರೆ ನೀಡಬೇಡಿ' ಎಂದು ಬಿನ್ನವಿಸಿಕೊಳ್ಳುತ್ತಾರೆ.

ಹಾವುಗಳನ್ನು ಹಿಡಿಯಲು ಮತ್ತು ಅವುಗಳನ್ನು ಸಂರಕ್ಷಿಸಲು ಬಹುತೇಕ ಸಮಯವನ್ನು ಮೀಸಲಿಡುವ ಸಾಯಿಬಾ ಅವರು 'ಸಾಯಿಬಾ ವೆಲ್‌ಫೇರ್ ಫೌಂಡೇಷನ್' ಎಂಬ ಸಂಸ್ಥೆಯನ್ನು ಆರಂಭಿಸಿದ್ದಾರೆ. ಹಾವು ಸೇರಿದಂತೆ ಇತರೆ ಪ್ರಾಣಿಪಕ್ಷಿಗಳನ್ನು ರಕ್ಷಿಸುವ ಕಾರ್ಯದಲ್ಲಿ ಈ ಸಂಸ್ಥೆಯು ಕಾರ್ಯನಿರತವಾಗಿದೆ. ಜೊತೆಗೆ ವಿವಿಧ ಸಮಾಜ ಸೇವಾ ಚಟುವಟಿಕೆಗಳಲ್ಲೂ ಈ ಸಂಸ್ಥೆಯು ತೊಡಗಿಕೊಳ್ಳುತ್ತದೆ.

ಅಂದ ಹಾಗೆ, ಸಾಯಿಬಾ ಬರೀ ಹಾವುಗಳ ರಕ್ಷಕಿಯಲ್ಲ. ಕಂಟೆಂಟ್ ಕ್ರಿಯೇಟರ್ ಆಗಿಯೂ ಇದ್ದಾರೆ. ಪ್ರತಿ ದಿನವೂ ಒಂದಿಲ್ಲೊಂದು ವಿಷಯದ ಮೇಲೆ ವಿಡಿಯೊಗಳನ್ನು ಸಿದ್ಧಪಡಿಸಿ, ತಮ್ಮ ಇನ್‌ಸ್ಟಾಗ್ರಾಮ್ ಅಕೌಂಟ್‌ನಲ್ಲಿ ಅಪ್ಲೋಡ್ ಮಾಡುತ್ತಾರೆ. ತಾವು ಏನೇ ಪೋಸ್ಟ್ ಮಾಡಿದರೂ ಅದರಲ್ಲಿ ಸಮಾಜಕ್ಕೆ ಒಂದು ಸಂದೇಶ ಇರುವಂತೆ ನೋಡಿಕೊಳ್ಳುತ್ತಾರೆ. ಅವರಿಗೆ ಫ್ಯಾನ್ ಫಾಲೋವರ್ಸ್ ಸಂಖ್ಯೆ 25 ಲಕ್ಷಕ್ಕೂ ಹೆಚ್ಚಿದೆ.

'ಹಾವನ್ನು ಹಿಡಿಯಲು ಹೊರಟಾಗಲೆಲ್ಲ, ನನಗೆ ಯಾವುದೇ ರೀತಿಯ ಭಯ ಅಥವಾ ಆತಂಕ ಇರುವುದಿಲ್ಲ. ಹಾವು ಹಿಡಿಯುವ ಸ್ಥಳದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿರುತ್ತಾರೆ. ಅದನ್ನು ಹಿಡಿಯುವುದು ಅಷ್ಟು ಸುಲಭವಲ್ಲ. ಅದಕ್ಕಾಗಿ ಸಾಕಷ್ಟು ತರಬೇತಿ ಪಡೆಯಬೇಕು. ಯಾವುದೇ ತರಬೇತಿ, ಮಾರ್ಗದರ್ಶನವಿಲ್ಲದೇ ಹಾವನ್ನು ಹಿಡಿಯುವ ಕೆಲಸಕ್ಕೆ ಮುಂದಾಗಬೇಡಿ. ಅರಣ್ಯ ಇಲಾಖೆಯವರ ಗಮನಕ್ಕೆ ತನ್ನಿ ಅಥವಾ ಹಾವುಗಳನ್ನು ಹಿಡಿಯುವ ಪರಿಣತ ವ್ಯಕ್ತಿಯನ್ನು ಸಂಪರ್ಕಿಸಿ ಎಂದು ಪದೇ ಪದೇ ಹೇಳುತ್ತೇನೆ. ಇದಕ್ಕೆ ಬಹಳಷ್ಟು ಮಂದಿ ಸ್ಪಂದಿಸುತ್ತಾರೆ' ಎಂದು ಸಾಯಿಬಾ ಶೆಳ್ಕೆ ಹೇಳುತ್ತಾರೆ.

ಕಾಲೇಜು ವಿದ್ಯಾರ್ಥಿನಿಯಾಗಿರುವ ಸಾಯಿಬಾ, ಓದನ್ನು ಮತ್ತು ಸಾಮಾಜಿಕ ಚಟುವಟಿಕೆಯನ್ನು ಜೊತೆಜೊತೆಯಲ್ಲೇ ನಿಭಾಯಿಸುತ್ತಾರೆ. 'ಹಾವುಗಳು ಪ್ರಕೃತಿ ನೀಡಿರುವ ಕೊಡುಗೆಯಾಗಿದ್ದು, ಅವುಗಳ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ' ಎಂದು ಹೇಳುವ ಅವರ ವಯಸ್ಸು 21. ಇಷ್ಟು ಕಿರಿಯ ವಯಸ್ಸಿನಲ್ಲೇ ಅವರು ಸಾವಿರಕ್ಕೂ ಹೆಚ್ಚು ಹಾವುಗಳನ್ನು ಹಿಡಿದಿದ್ದಾರೆ. ಸುರಕ್ಷಿತವಾಗಿ ಕಾಡಿಗೆ ಬಿಟ್ಟಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65